## ಮತದಾನ ಜಾಗೃತಿ ಅಭಿಯಾನ

# ಮತದಾರರ ಪಟ್ಟಿ ಪರಿಶೀಲನೆ




**ಕಾರ್ಕಳ:** ಮತದಾರರ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2020ರ ಅಂಗವಾಗಿ ಮತದಾರರ ಪಟ್ಟಿಯ ಪರಿಶೀಲನಾ ಕಾರ್ಯಕ್ರಮದಡಿ ಮಂಜುನಾಥ ಪೈ ಸ್ಮಾರಕ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಮತದಾರರ ಪಟ್ಟಿಯಲ್ಲಿ ಜಾಗೃತಿ ಅಭಿಯಾನ ನಡೆಯಿತು.

ನೊಂದಾವಣೆ, ಹೆಸರು, ವಿಳಾಸದಲ್ಲಿ ತಿದ್ದುಪಡಿ ಮಾಡುವ ಬಗ್ಗೆ ವೋಟರ್ ಹೆಲ್ಪ್‌ಲೈನ್ ಮೊಬೈಲ್ ಆ್ಯಪ್ ಹಾಗೂ ಎನ್‌ವಿಎಸ್‌ಪಿ.ಪೋರ್ಟಲ್‌ಗಳ ಮೂಲಕ ಪರಿಶೀಲನೆ ಮಾಹಿತಿ ನೀಡಲಾಯಿತು. ಅಸೆಂಬ್ಲಿಲೆವೆಲ್ ಮಾಸ್ಟರ್ ಟ್ರೈನರ್ ಕೃಷ್ಣಮೂರ್ತಿವೈದ್ಯ ಮಾಹಿತಿ ನೀಡಿದರು. ಪ್ರಾಂಶುಪಾಲ ಶ್ರೀವರ್ಮ ಅಜ್ರಿ ಎಂ. ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಲೆಕ್ಕಾಧಿಕಾರಿ ಶಿವಪ್ರಸಾದ್, ತಾಲೂಕು ಕಚೇರಿಯ ಚುನಾವಣಾ ವಿಭಾಗದ ಸುಪ್ರಿಯಾ, ಗ್ರಂಥಪಾಲಕ ವೆಂಕಟೇಶ ಹಾಗೂ ಸಹಪ್ರಾಧ್ಯಾಪಕ ಮಂಜುನಾಥ್ ಇದ್ದರು. ವಿದ್ಯಾರ್ಥಿ ನಾಯಕಿ ಶಬರಿ ಸ್ವಾಗತಿಸಿದರು. ಅಶ್ವಿತಾ ನಿರೂಪಿಸಿದರು.